**OS No. 34/2016**
**ಡಿ.ಡಬ್ಲ್ಯೂ: 1**

**ದಿನಾಂಕ 15-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿಯ ಪರ: ಶ್ರೀ ಎಮ್. ವಿ. ಕೆ. ವಕೀಲರಿಂದಃ**

1. ದಾವಾ ಆಸ್ತಿಯನ್ನು ಎಷ್ಟು ರೂಪಾಯಿಗಳು ಪ್ರತಿಫಲ ಹಣವನ್ನು ನೀಡಿರುತ್ತೀರಾ? ಎಂದರೆ ಸಾಕ್ಷಿಯು 4 ಖರಿದಿ ಪತ್ರದಲ್ಲಿ 48,000/-, 48,000/-, 79,000/-, 79,000/- ರೂ. ಗಳನ್ನು ನೀಡಿರುತ್ತೇನೆ. ಸದರಿ ಎಲ್ಲಾ ಖರೀದಿ ಪತ್ರದ ಪ್ರತಿಫಲ ಹಣ ಒಟ್ಟು 2 ಲಕ್ಷ 54 ಸಾವಿರ ರೂ. ಆಗುತ್ತದೆ ಎಂದರೆ ಸರಿ. ಸದರಿ 4 ಖರೀದಿ ಪತ್ರಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ನಾನು ಹೇಳಿರುವ ಚಕಬಂದಿ ಮತ್ತು ಖರೀದಿ ಪತ್ರದ ಚಕಬಂದಿಗಳು ಬೇರೆ-ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಾನು 4 ಖರೀದಿ ಪತ್ರಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ಸದರಿ ನಾವು ಖರೀದಿ ಮಾಡಿದ ಜಮೀನು ಫಲವತ್ತಾದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿದ ದಿನಾಂಕದಿಂದ ಇಲ್ಲಿಯವರೆಗೆ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾವು ಖರೀದಿ ಮಾಡಿದ ನಂತರ ನಮಗೆ ಆರ್ಥಿಕವಾಗಿ ತೊಂದರೆ ಇರುವುದರಿಂದ ನಾವು ವಾದಿಯ ಜೊತೆ ಕರಾರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರ ನಿಪಿ-1 ರ ಮಾತುಕತೆ ನಮ್ಮ ಗುರುಗಳಾದ ಹಜರತ್ ಅಲಹಾಜ ಸೈಯದ ಸಿರಾಜ ಅಜರ ಇವರ ಮುಂದೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿಪಿ-1 ರ ಪ್ರಕಾರ ನಾವು ವಾದಿಯ ಕಡೆಯಿಂದ 2 ಲಕ್ಷ 11 ಸಾವಿರ ರೂ. ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣ ಪಡೆದುಕೊಂಡು ದಿನಾಂಕಃ 02-06-1999 ರಂದು ವಾದಿಯ ಪರವಾಗಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ-1 ಕ್ಕೆ ನನ್ನ ತಂದೆ, ನಾನು, ನನ್ನ ತಾಯಿ ಮತ್ತು ನನ್ನ ಸಹೋದರ ಅದರಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಸಹಿ ಮಾಡಿದ್ದು, ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ನಿಪಿ-1 ಕ್ಕೆ 6 ಜನ ಹಜರತ್ ಅಲಾಜ, ಮೊಹ್ಮದ ಜುಬೇರ, ಮೊಹ್ಮದ ಮಕಬುಲ ಅಹ್ಮದ, ಮೊಹ್ಮದ ಅಬಿದ ಹುಸೇನ, ಮೊಹ್ಮದ ಮೇಹಬೂಬ ಅಲಮ, ಮೊಹ್ಮದ ಹಮೀರುದ್ದಿನ್ ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ವಾದಿಯ ಪರವಾಗಿ ಬರೆದುಕೊಟ್ಟರು ಅವನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಪ್ರಕಾರ ನಾವು ಸದರಿ ಜಮೀನಿನಲ್ಲಿ ಏನೇ ಅಭಿವೃದ್ಧಿ ಪಡಿಸಿ ಉತ್ಪನ್ನಗಳನ್ನು, ಭೂ ಪರಿವರ್ತನೆ ಮಾಡಿ ನಿವೇಶನ ವಿನ್ಯಾಸದಿಂದ ಬರತಕ್ಕಂತ ಖರ್ಚಿನಲ್ಲಿ ವಾದಿ ಮತ್ತು ನಾವು ಅರ್ಧ-ಅರ್ಧ ಖರ್ಚು ಮಾಡಬೇಕಾಗಿತ್ತು ಎಂದು ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಅದರ ಪ್ರಕಾರ ಬಂದ ಆಸ್ತಿಯಲ್ಲಿ ಅರ್ಧ-ಅರ್ಧ ತೆಗೆದುಕೊಳ್ಳಬೇಕು ಎಂಬ ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕರಾರಿನಲ್ಲಿ ಒಂದು ವೇಳೆ ಅಭಿವೃದ್ಧಿ ಪಡೆಸದಿದ್ದರೆ ವಾದಿಗೆ ದಾವಾ ಜಮೀನಿನಲ್ಲಿ ಅರ್ಧ ಭಾಗದ ಖರೀದಿ ಪತ್ರ ಮಾಡಿಕೊಡುವ ಕರಾರು ಇತ್ತು ಎಂದರೆ ಸರಿಯಲ್ಲ.

3. ಸದರಿ ನಿಪಿ-1 ರ ಪ್ರಕಾರ ದಾವಾ ಆಸ್ತಿಯ ಪಹಣಿ ಖಂಡಿಕೆ ನಂಬರ 10 ಮತ್ತು 11 ರಲ್ಲಿ ಶರಾ ಬರೆದಿತ್ತು ಎಂದರೆ ಸಾಕ್ಷಿಯು ಸದರಿ ನಮೂದು ಕೋರ್ಟ ಆದೇಶದ ಮೂಲಕ ಸನಃ 2010 ರಲ್ಲಿ ತೆಗೆದುಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯಲ್ಲಿ ಬರೆದ ಶರಾ ವಿರುದ್ದ ಸಹಾಯಕ ಆಯುಕ್ತಕರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ-2 ನ್ನು ತೋರಿಸಲಾಗಿ ಸಾಕ್ಷಿಯು ಅಲ್ಲಗಳೆಯುತ್ತಾರೆ. ಸದರಿ ಅಪೀಲ ದಿನಾಂಕಃ 23-12-2002 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಜಾ ಆಗಿರುವ ಅಪೀಲ ವಿರುದ್ದ ರಿವಿಜನ್ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಾನೇ ಅಪೀಲ ಮಾಡಿ ನನಗೆ ಮಾಹಿತಿ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯು ಯಾದಗಿರಿ ಕಂದಾಯ ಕ್ಷೇತ್ರದಲ್ಲಿ ಇರುತ್ತದೆ ಎಂದರೆ ಸರಿ. ನಾವು ಶಹಾಪೂರದಲ್ಲಿ ಇರುತ್ತೇವೆ ಎಂದರೆ ಸರಿ. ನಾವು ಶಹಾಪೂರದಲ್ಲಿ ಇರುವುದರಿಂದ ದಾವಾ ಜಮೀನುಗಳನ್ನು ಅಭಿವೃದ್ದಿ ಮಾಡಲು ಆಗದೇ ಇರುವುದರಿಂದ ವಾದಿಯನ್ನು ಪಾರ್ಟನರ ಎಂದು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಅಭಿವೃದ್ದಿ ಮಾಡೋಣ ಎಂದು ಕೇಳಿದಾಗ ನಾವು ವಾದಿಯ ವಿರುದ್ದ ಅಸಲು ದಾವಾ ನಂಬರ 133/2003 ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆ ನಂಬರ 133/2003 ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ನಂಬರ 133/2003 ರ ತೀರ್ಪಿನ ವಿರುದ್ದ ಮೇಲ್ಮನವಿ ನಂಬರ 2/2009 ನೇದ್ದನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿ ನಂಬರ 2/2009 ಇದು ನಮ್ಮ ಪರವಾಗಿ ತೀರ್ಪು ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿ ನಂಬರ 2/2009 ರ ತೀರ್ಪಿನ ವಿರುದ್ದ ವಾದಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್. ಎಸ್, ಎ. ನಂಬರ 7467/2010 ನೇದ್ದನ್ನು ಸಲ್ಲಿಸಿರುತ್ತಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನಮ್ಮ ಪರವಾಗಿ ತೀರ್ಪು ಆಗಿರುತ್ತದೆ ಎಂದು ನುಡಿಯುತ್ತಾರೆ.

ಸದರಿ ಆ್‌ರ್ ಎಸ್. ಎ. ನಂಬರ 7467/2010 ರಲ್ಲಿ ಇನ್ನು ಅಂತಿಮವಾಗಿ ನಿರ್ಣಯವಾಗಿರುವುದಿಲ್ಲ ಆದರೆ ವಾದಿಯೇ ಸದರಿ ಅಪೀಲನ್ನು ಪ್ರಸ್ತುತ ದಾವೆ ನಂಬರ 34/2016 ಮಾಡುವ ಸಲುವಾಗಿ ಹಿಮ್ಮಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯ ಅಪೀಲು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕಃ 25-11-2015 ರಂದು ವಾದಿಯು ಸದರಿ ಅಪೀಲ ನಂಬರ 7467/2010 ಹಿಮ್ಮಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪೀಲು ಹಿಮ್ಮಪಡೆದುಕೊಂಡ ನಂತರ ನಮ್ಮ ಮತ್ತು ವಾದಿಯ ನಡುವೆ ಹಿರಿಯರ ಮುಂದೆ ಮಾತು-ಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮಾತು-ಕತೆಯಲ್ಲಿ ನಾವು ವಾದಿಗೆ ಅರ್ಧ ಜಮೀನನ್ನು ಖರೀದಿ ಪತ್ರ ಮಾಡಿಕೊಡಲು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸ್ವಲ್ಪ ದಿನದ ನಂತರ ಸದರಿ ಪಂಚಾಯಿತಿಯಲ್ಲಿ ಒಪ್ಪಿಕೊಂಡರೂ ಕೂಡ ಖರೀದಿ ಪತ್ರ ಮಾಡಿಕೊಡಲು ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಾವು ನಿರಾಕರಿಸಿದ ನಂತರ ವಾದಿಯು ನಮಗೆ ಕಾನೂನು ತಿಳುವಳಿಕೆ ನೋಟಿಸು ನೀಡಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ನಷ್ಟ ಉಂಟು ಮಾಡುವ ಉದ್ದೇಶದಿಂದ ಖರೀದಿ ಪತ್ರ ಮಾಡಿಕೊಡಲು ನಿರಾಕರಿಸಿರುತ್ತೀರಿ? ಎಂದರೇ ಸಾಕ್ಷಿಯು ಮಾತು-ಕತೆಯೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ರಲ್ಲಿರುವ ಸಾಕ್ಷಿಯ ಮತ್ತು ತಮ್ಮ ಸಹಿಗಳನ್ನು ತೋರಿಸಲಾಗಿ ಸಾಕ್ಷಿಯು ನಿಪಿ-1(ಎ) ರಿಂದ (ಡಿ) ಸ್ಪಷ್ಟವಾಗಿ ಅಲ್ಲಗಳೆಯುತ್ತಾರೆ. ಸದರಿ ನಿಪಿ-1 ರಲ್ಲಿ ಸಾಕ್ಷಿದಾರರು ನಮ್ಮ ಸಮಕ್ಷಮದಲ್ಲಿಯೇ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಹಣ ಕೊಟ್ಟು ಖರೀದಿ ಕರಾರು ಪತ್ರವನ್ನು ಬರೆಸಿಕೊಂಡಿದ್ದು ನಾವು ಖರೀದಿ ಪತ್ರವನ್ನು ಬರೆದುಕೊಡಲು ಬಾದ್ಯಸ್ಥ ಇರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**